ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆಯನ್ವಯ ಮಂಜೂರು ಮಾಡಲಾದ ಹುಡ್ಕೋ ಮನೆಗಳು

೫೨೭ ಶ್ರೀ ವಿ. ವೆಂಕಟಯ್ಯಪ್ಪ (ಶಿಡ್ಲಘಟ್ಟ).— ಮಾನ್ಯ ಕಾನೂನು, ಸಂಸದೀಯ, ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆಯ ಮೇರೆಗೆ ಹರಿಜನರಿಗೆ ಮಂಜೂರು ಮಾಡಲಾದ ಹುಡ್ಕೋ ಮನೆಗಳೆಷ್ಟು ?

ಆ) ಸದರಿ ಮನೆಗಳನ್ನು ಯಾವ ಸಾಲಿನಲ್ಲಿ ಮಂಜೂರು ಮಾಡಲಾಯಿತು. ಎಲ್ಲಾ ಮನೆಗಳು ಪೂರ್ಣಗೊಂಡಿವೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ವಸತಿ ಮಂತ್ರಿಗಳು).—

ಅ) ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆಯನ್ವಯ ಹರಿಜನರಿಗೆ ಹುಡ್ಕೋ ಮನೆಗಳನ್ನು ಮಂಜೂರು ಮಾಡಿಲ್ಲ.

ಆ) ಮೇಲಿನ ಉತ್ತರದ ಅನ್ವಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ನಿರುದ್ಯೋಗಿಗಳ ಸಂಖ್ಯೆ

೫೨೮. ಶ್ರೀ ಕೆ. ಬಿ. ಶಾನಪ್ಪ (ಜಹಬಾದ್).—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೇ?

(ಅ) ಅಭಿಯಂತರರು, ವೈದ್ಯರು, ಪದವೀಧರರು, ಸ್ನಾತಕೋತ್ತರ ಪದವೀಧರರು ಮತ್ತು ಡಿಪ್ಲೊಮೋದಾರರು ಎಷ್ಟು ಮಂದಿ ಗುಲ್ಬರ್ಗ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿ ಕೊಂಡಿದ್ದಾರೆ.

(ಆ) ನೋಂದಾಯಿಸಿಕೊಂಡಿರುವ ಪೋಟ್ರಿಕ್ ಉತ್ತೀರ್ಣರು ಮತ್ತು ಅನುತ್ತೀರ್ಣರ ಸಂಖ್ಯೆ.

(ಇ) ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ರಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ.

(ಈ) ಜಿಲ್ಲೆಯಲ್ಲಿನ ನಿರುದ್ಯೋಗ ನಿರ್ಮೂಲನೆಗೆ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳಾವುವು?

ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳು).—

(ಅ) ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಗುಲ್ಬರ್ಗದಲ್ಲಿ ಸ್ನಾತಕೋತ್ತರ ಪದವೀಧರರು ಮತ್ತು ವೃತ್ತಿನಿರತ ಮತ್ತು ಕಾರ್ಯನಿರ್ವಾಹಕ ವಿದ್ಯಾರ್ಹತೆ ಹೊಂದಿರುವವರನ್ನು ಬಿಟ್ಟು ಉಳಿದವರು ನೋಂದಾಯಿಸಿಕೊಂಡಿರುತ್ತಾರೆ. ಸ್ನಾತಕೋತ್ತರ ಪದವೀಧರರು ಮತ್ತು ವೃತ್ತಿ ನಿರತ ವಂತು, ಕಾರ್ಯನಿರ್ವಾಹಕ ಪದವೀಧರರು ಬೆಂಗಳೂರಿನಲ್ಲಿರುವ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುತ್ತಾರೆ.

೩೧–೧೨–೮೪ಕ್ಕೆ ತಾರೀಖಿಗೆ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ ಬೆಂಗಳೂರಿನಲ್ಲಿ ನೋಂದಾಯಿಸಿಕೊಂಡಿರುವ ಗುಲ್ಬರ್ಗ ಜಿಲ್ಲೆಯ ಅಭಿಯಂತರರು, ವೈದ್ಯಕೀಯ ವಂತು, ಸ್ನಾತಕೋತ್ತರ ಪದವೀಧರರ ಸಂಖ್ಯೆ.—

೧)	ಅಭಿಯಂತರ ಪದವೀಧರರು	...	೩೯
೨)	ವೈದ್ಯಕೀಯ ಪದವೀಧರರು	...	೫೭
೩)	ಇತರರು	...	೧೯೫
೪)	ಸ್ನಾತಕೋತ್ತರ ಪದವೀಧರರು		

ಅ)	ಕಲೆ	...	೧೬೩
ಆ)	ವಿಜ್ಞಾನ	...	೫೪
ಇ)	ವಾಣಿಜ್ಯ	...	—

೩೧ನೇ ಜನವರಿ ೧೯೮೪ನೇ ತಾರೀಖಿಗೆ ಗುಲ್ಬರ್ಗ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುವ ಪದವೀಧರರು ಮತ್ತು ಡಿಪ್ಲೊಮೋದಾರರ ಸಂಖ್ಯೆ.

೧)	ಪದವೀಧರರು	...	೧,೮೫೪
೨)	ಡಿಪ್ಲೊಮೋದಾರರು	...	೨೨೫
ಅ) ೧)	ಮೆಟ್ರಿಕ್ ಉತ್ತೀರ್ಣರು (ಎಸ್.ಎಸ್.ಎಲ್.ಸಿ. ಉತ್ತೀರ್ಣರು)	...	೧೫,೭೨೬
೨)	ಮೆಟ್ರಿಕ್ ಅನುತ್ತೀರ್ಣರು ಮತ್ತು ಒನೇ ತರಗತಿ ಉತ್ತೀರ್ಣರು	...	೩,೮೪೨
೩)	ಒನೇ ತರಗತಿ ಅನುತ್ತೀರ್ಣರು ಅಕ್ಷರಸ್ಥರು ಮತ್ತು ಅನಕ್ಷರಸ್ಥರು	..	೮,೫೦೦

೩) ೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ನೇ ಸಾಲಿನಲ್ಲಿ ಗುಲ್ಬರ್ಗ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ ಇಂತಿದೆ.

೧೯೮೧-೮೨	೧೯೮೨-೮೩	೧೯೮೩-೮೪ (೧-೪-೮೩ ರಿಂದ ೩೧-೧-೮೪ರವರೆಗೆ)
೮,೦೭೨	೧೨,೦೫೫	೮,೧೬೩

೪) ಸರ್ಕಾರವು ಗುಲ್ಬರ್ಗ ಜಿಲ್ಲೆಯಲ್ಲಿನ ನಿರುದ್ಯೋಗ ನಿರ್ಮೂಲನ ಅಂಗವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ಉದಾಹರಣೆಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಕೇಂದ್ರೀಯ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಕ್ಷಾಮಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಟ್ರೈಸವ್ ಕಾರ್ಯಕ್ರಮ.

ಅಂತೆಯೇ ನಿರುದ್ಯೋಗ ವಿದ್ಯಾವಂತರು ಸ್ವಯಂ ಉದ್ಯೋಗಗಳನ್ನು ಕೈಗೊಳ್ಳುವಂತೆ ಮಾರ್ಗದರ್ಶನಗಳನ್ನು ನೀಡುತ್ತಿವೆ.

ಹುಬ್ಬಳ್ಳಿಯ ಮಹದೇವ ಹತ್ತಿ ಗಿರಣಿಯ ಬಗ್ಗೆ.

೫೮೯. ಶ್ರೀ ಎಂ. ಜಿ. ಜಲತಾರಗರ್ (ಹುಬ್ಬಳ್ಳಿ):—ಸಣ್ಣ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ ಮಹದೇವ ಹತ್ತಿ ಗಿರಣಿಯನ್ನು ಸರ್ಕಾರವು ನಡೆಸುತ್ತಿರುವುದು ನಿಜವಲ್ಲವೆ?

ಆ) ಮೇಲ್ಕಂಡ ಗಿರಣಿಯನ್ನು ಸರ್ಕಾರದವರು ವಹಿಸಿಕೊಂಡಾಗಿನಿಂದ ೧೯೮೪ನೇ ಇಸವಿ ಫೆಬ್ರುವರಿ ೨೯ರವರೆಗೆ ಆದ ಲಾಭ ಅಥವಾ ಹಾನಿ ಎಷ್ಟು (ವರ್ಷವಾರು ಮಾಹಿತಿಯನ್ನೊದಗಿಸುವುದು)

ಇ) ಮೇಲ್ಕಂಡ ಗಿರಣಿಯನ್ನು ಅವಧಿ ಮುಗಿದ ನಂತರ ಮಹಾದೇವ ಹತ್ತಿ ಗಿರಣಿ ಮಾಲೀಕರಿಗೆ ವಾಪಸ್ಸು ಕೊಡುವ ಬಗ್ಗೆ ಕರಾರು ಆಗಿದೆಯೇ ಮತ್ತು ಆಗಿದ್ದಲ್ಲಿ, ಆ ಕರಾರುಗಳು ಯಾವುದು.

ಈ) ಮೇಲ್ಕಂಡ ಗಿರಣಿಯನ್ನು ಸರ್ಕಾರದವರು ವಹಿಸಿಕೊಂಡಿದ್ದರಿಂದ ವಿದೇಶಗಳಿಗೆ ರಫ್ತು ಮಾಡಿದ ಸರಕುಗಳಾವುವು ಹಾಗೂ ಅವುಗಳ ಮೌಲ್ಯವೆಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಸಚಿವರು).

ಅ) ಹೌದು.